ANUBHAVS



# ಮೃತ್ಯುವನ್ನು ಹಿಂದೆ ಕಳುಹಿಸಿದವರು

© Copyright 2010, Manasamarthyadata.com

-ಶೈಲೇಶ್ ಖಿಸ್ತ್ ರಾವ್

ತಾ.19 ಮೇ 2008ರಂದು ನನ್ನ ಮಿತ್ರ ಹಾಗೂ ಪರಿವಾರದೊಂದಿಗೆ ಅತುಲಿತ ಬಲಿಧಾಮ (ರತ್ನಗಿರಿ) ಗಣಪತಿ ಫುಲೆ ಪಾವಸ ಇತ್ಯಾದಿ ತೀರ್ಥಕ್ಷೇತ್ರಗಳಿಗೆ ಸುಮೊ ಗಾಡಿಯಲ್ಲಿ ಹೊರಟೆವು. ದಾರಿಯಲ್ಲಿ ‘ರಾಜಪುರ’ ಎಂಬ ಸ್ಥಳದಲ್ಲಿ ಗಂಗಾಸ್ನಾನ ಮಾಡಲು ನಿಂತೆವು.

ನಾವು ರಸ್ತೆಯ ಬದಿಯಿಂದಲೇ ನಡೆಯುತ್ತಾ ಕೆಳಗೆ ಇಳಿಯುತ್ತಿದ್ದೇವು. ಆಗ ಬ್ರೇಕ್‌ಫೇಲ್ ಆದ ಒಂದು ಕ್ವಾಲಿಸ್‌ಗಾಡಿ ತುಂಬಾ ಸ್ಪೀಡಾಗಿ ಬಂದು ನನ್ನ ಪತ್ನಿಗೆ ಬಡಿರಿದು ಹಾಗೂ ನಂತರ ಅದರ ಎಡಬದಿಯ ಮುಂದಿನ ಹಾಗೂ ಹಿಂದಿನ ಚಕ್ರ ನನ್ನ ಪತ್ನಿಯ ಮೇಲಿಂದ ಹೋಯಿತು, ನನ್ನ ಮಕ್ಕಳು ಯಾರೋ ಎತ್ತಿ ದೂರ ಎಸೆದಂತೆ ಇನ್ನೊಂದು ಕಡೆ ಹೋಗಿ ಬಿದ್ದರು, ಅದೇ ಗಾಡಿ ನನಗೂ ಜೋರಾಗಿ ತಾಗಿ ನಾನು ಎದುರಿನಲ್ಲಿ ನಿಂತಿದ್ದ ಗಾಡಿಗೆ ಅಪ್ಪಳಿಸಿದೆನು. ಇವೆಲ್ಲವೂ ಒಂದೆರಡು ಸೆಕೆಂಡಿನಲ್ಲಿ ಜರುಗಿತು.

ಮಕ್ಕಳನ್ನು ಬೇರೆಕಡೆ ಎಸೆದವರು ಯಾರು? ಹೀಗೆ ಆಗಿರದಿದ್ದರೆ ಏನಾಗುತ್ತಿತ್ತು? ನಾನು ಹಾಗೂ ನನ್ನ ಗೆಳೆಯ ಕೂಡಿ ಪತ್ನಿಯನ್ನು ಗಾಡಿಯಲ್ಲಿ ಕೂರಿಸಿದೆವು. ಹಾಗೂ ಮಕ್ಕಳನ್ನು ಡಿಕ್ಕಿಯಲ್ಲಿ ಕೂರಿಸಿದೆವು. ಮಕ್ಕಳು ಜೋರು ಜೋರಾಗಿ ಅಳುತ್ತಿದ್ದರು. ನಾವು ರಾಮರಕ್ಷೆಯ ಪಠಣೆ ಶುರುಮಾಡಿದೆವು. ನನ್ನ ಪತ್ನಿ ಬಾಪೂ, ಬಾಪೂ ಎಂದು ಹೇಳುತ್ತಿದ್ದಳು. ನಾವು ರಾಜಾಪುರ ಗ್ರಾಮೀಣ ಆಸ್ಪತ್ರೆಗೆ ಹೋದೆವು. ಕೂಡಲೇ ಅನಿಲ್‌ಸಿಂಹ್ ಪನ್ವಾಳಿಗೆ ನಾವು ಎಲ್ಲಾ ವಿಷಯ ತಿಳಿಸಿದೆವು. ಅವರು ಕೂಡಲೇ ರತ್ನಗಿರಿ ಕೇಂದ್ರದ ಪ್ರಮುಖ ಸೇವಕರನ್ನು ಸಂಪರ್ಕಿಸಿ ಅಲ್ಲಿಯ ಕಾರ್ಯಕರ್ತರನ್ನು ನಮ್ಮ ಸಹಾಯಕ್ಕೆ ಕಳುಹಿಸಲು ಹೇಳಿದರು. ಐದು ನಿಮಿಷದಲ್ಲಿಯೇ ಅಲ್ಲಿಗೆ ರಾಜಾಪುರದ ಕಾರ್ಯಕರ್ತರು ಬಂದರು.

ಆಸ್ಪತ್ರೆಯಲ್ಲಿದ್ದ ವೈದ್ಯರು ನನ್ನ ಪತ್ನಿಯ ಗಂಭೀರ ಪರಿಸ್ಥಿತಿಯನ್ನು ನೋಡಿ, ಅವಳನ್ನು ರತ್ನಗಿರಿಯ ಆಸ್ಪತ್ರೆಗೆ ವರ್ಗಾಯಿಸಲು ತಿಳಿಸಿದರು. ಆದರೆ, ನಾನು ಧೈರ್ಯ ಬಿಡಲಿಲ್ಲ. ಪರಮಪೂಜ್ಯ ಬಾಪೂರವರ ಸ್ಮರಣೆ ಮಾಡುತ್ತಲೇ ಇದ್ದೆ, ನನ್ನ ಸಂಕಟ ಎಷ್ಟೇ ದೊಡ್ಡದಿರಲ್ಲಿ, ಆದರೆ ನನ್ನ ಮಿತ್ರ

ಸುಖ, ಸದ್ಗುರು ಅನಿರುದ್ಧರು ನನ್ನ ಒಟ್ಟಿಗೇ ಇರುತ್ತಾರೆ ಎಂಬ ದೃಢ ವಿಶ್ವಾಸ ನನ್ನಲ್ಲಿತ್ತು. ರತ್ನಗಿರಿಗೆ ನಾವು ಮುಟ್ಟುವ ಮುಂಚೆಯೇ ಅಲ್ಲಿಯ ಕಾರ್ಯಕರ್ತರು ಆಸ್ಪತ್ರೆಯಲ್ಲಿದ್ದರು.

ನನ್ನ ಪತ್ನಿಯ ಎಕ್ಸ್‌ರೇ ಹಾಗೂ ಸೊನೋಗ್ರಾಫಿ ಮಾಡಲಾಯಿತು. ಅವಳ ಹೊಟ್ಟೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಕ್ತ ಸ್ರಾವವಾಗಿದೆಯೆಂದು ಗೊತ್ತಾಯಿತು. ಬೇಗನೆ ಅಪರೇಶನ್ ಮಾಡಲು ನಿಶ್ಚಯಿಸಿದೆವು. ಅಪರೇಶನ್ ತುಂಬಾ ದೊಡ್ಡದೆಂದು 'ದೇವರುಖ್' ನಿಂದ ಡಾ. ದೀವಾಕರ್‌ರನ್ನು ಕರೆಯಲಾಯಿತು. ಅವರು ಅಪರೇಶನ್ ನ ಎಲ್ಲಾ ತಯಾರಿ ಮಾಡಿ ನನ್ನನ್ನು ಕರೆದು '' ಶೇ. 100ರಷ್ಟು ಪ್ರಯತ್ನ ಮಾಡುತ್ತೇವೆ ಉಳಿದದ್ದು ದೇವರ ಕೈಯಲ್ಲಿದೆ'' ಎಂದು ಹೇಳಿದರು ನಾನು ಅವರಿಗೆ ಹೇಳಿದೆ '' ನೀವು ನಿಮ್ಮ ಕಡೆಯಿಂದ ಶೇ. 100ರಷ್ಟು ಪ್ರಯತ್ನ ಮಾಡಿ ಬಾಕಿ ಶೇ. 8ರಷ್ಟು ಪ್ರಯತ್ನ ನನ್ನ ಬಾಪೂಜಿ ಅವರು ಮಾಡುತ್ತಾರೆ'' ಎಂದು. ನಾನು ಫಾರಮ್ ಮೇಲೆ ಹಸ್ತಾಕ್ಷರ ಮಾಡಿದೆನು. ಆಗ ನನ್ನ ಪತ್ನಿ ಮನಿಷ ಪೂರ್ಣ ಎಚ್ಚರಿಕೆಯಲ್ಲಿದ್ದಳು. ಅವಳಿಗೆ ಉದಿ ಹಚ್ಚಿದೆನು ಹಾಗೂ ಅವಳಿಗೆ ಹೇಳಿದೆನು ಪರಮ ಪೂಜ್ಯ ಬಾಪೂಜಿಯವರು ನಮ್ಮೊಟ್ಟಿಗೆ ಇದ್ದೆ ಇದ್ದಾರೆ. ಆಗ ಅವಳು ನನ್ನ ಮಾತಿಗೆ ಒಪ್ಪಿತಲೆ ಅಲುಗಾಡಿಸಿದಳು.

ಬೆಳಿಗ್ಗೆ 6ಘಂಟೆಗೆ ಅಪರೇಶನ್ ಥಿಯೇಟರ್ ಒಳಗೆ ಕೊಂಡೊಯ್ಯಲಾಯಿತು. ನಾನು ಬಾಪೂಜಿಯಲ್ಲಿ ಪ್ರಾರ್ಥಿಸುತ್ತಿದ್ದೆನು. ಅದೇ ಸಮಯ ರತ್ನಗಿರಿಯ ಕಾರ್ಯಕರ್ತೆ ಶ್ರೀಮತಿ ಶಿಂಧೆ ಹಾಗೂ ಬಾಟ್ಕರ್ ನನ್ನ ಮಕ್ಕಳನ್ನು ಅತುಲಿದ ಬಲಧಾಮಕ್ಕೆ ಕೊಂಡೊಯ್ದರು. ಅವರು ನಮ್ಮೆಲ್ಲರಿಗೆ ಸಹಿ ಹಲ್ವಾ ತಂದಿದ್ದರು. ಬಾಪೂಜಿಯವರೇ ಪ್ರಸಾದ ರೂಪದಲ್ಲಿ ಸಿಹಿ ಹಲ್ವಾ ತಿನ್ನಿಸಿ, ಚಂತೆ ಮಾಡಬೇಡ, ಎಲ್ಲಾ ಗುಣವಾಗುತ್ತದೆ ಎಂದು ಹೇಳಿದಂತಾಯಿತು.

6 ಘಂಟೆಗೆ ಶುರುವಾದ ಅಪರೇಶನ್ ಮೂರು ಘಂಟೆವರೆಗೆ ನಡೆಯಿತು. 9ಘಂಟೆಗೆ ಡಾ. ದಿವಾಕರ್ ಹೊರಗೆ ಬಂದು ಅಪರೇಶನ್ ಯಶಸ್ವಿಯಾಯಿತೆಂದು ಹೇಳಿದರು.

ಇಷ್ಟು ದೊಡ್ಡ ವಾಹನ ಹೊಟ್ಟೆಯ ಮೇಲಿಂದ ಹೋದರೂ ಹೊಟ್ಟೆಯೊಳಗಿನ ಲೀವರ್, ಕಿಡ್ನಿ ಇತ್ಯಾದಿ ಭಾಗಗಳಿಗೆ ಸ್ವಲ್ಪವೂ ಪೆಟ್ಟಾಗಿಲ್ಲ. ಇದೊಂದು ಆಶ್ಚರ್ಯದ ಸಂಗತಿ. ಎಲ್ಲಾ ಘಟನೆಗಳನ್ನು ಕೇಳಿದ ನಂತರ ಈ ಹೆಂಗಸು ಜೀವಂತ ಹೇಗೆ ಉಳಿದಳೆಂದು ವೈದ್ಯರಿಗೆ ಆಶ್ಚರ್ಯವಾಯಿತು. ಅಪರೇಶನ್ ಮಾಡುವಾಗ ವೈದ್ಯರ ಕೈ ಕೆಲಸ ಮಾಡುತ್ತಿತ್ತು. ಆದರೆ, ಅಪರೇಶನ್ ಯಾವುದೋ ಶಕ್ತಿ ಮಾಡುತ್ತಿರುವಂತೆ ವೈದ್ಯರಿಗೆ ಭಾಸವಾಯಿತು.

ಅಪರೇಶನ್ ಬಳಿಕ ನನ್ನ ಪತ್ನಿಯನ್ನು ಐಸಿಸಿಯುನಲ್ಲಿ ಭರ್ತಿ ಮಾಡಿದರು ಹಾಗೂ 6 ಬಾಟಲ್ ರಕ್ತ 2 ಬಾಟಲ್ ಪ್ಲಾಸ್ಮಾ ಕೊಡಲಾಯಿತು. 10 ದಿನದಲ್ಲಿ ಅವಳ ಆರೋಗ್ಯ ತುಂಬಾ ಸುಧಾರಿಸಿತು. ಮಧ್ಯದಲ್ಲಿ ಕೆಲವು ಬಾಪೂ ಭಕ್ತರು ಅವಳನ್ನು ಕಾಣಲು ಬರುತ್ತಿದ್ದರು. ಉದಿ ಪ್ರಸಾದವನ್ನು ತರುತ್ತಿದ್ದರು. ಫಲ ಸ್ವರೂಪದಲ್ಲಿ ನನ್ನ ಧೈರ್ಯ ಹೆಚ್ಚಾಗುತ್ತಿತ್ತು. ಆದರೆ, 26 ಮೇಯಿಂದ ಅವಳಿಗೆ ಅರಸಿಣ ಬಣ್ಣದ ವಾಂತಿ ಶುರುವಾಯಿತು. ಆಗ ನಾನು ತುಂಬಾ ಹೆದರಿದೆ. ಬಾಪೂಜಿಯವರ ಸ್ಮರಣೆ ಮಾಡಿ ಮುಂಬಯಿಗೆ ಕೊಂಡೊಯ್ಯುವ ವಿಚಾರ ಮಾಡಿದೆನು. ಮಧ್ಯಾಹ್ನ 4 ಘಂಟೆಗೆ ನಾವು ಆ್ಯಂಬುಲೆನ್ಸ್‌ನಲ್ಲಿ ಮುಂಬಯಿಗೆ ಹೊರಟೆವು. ‘ಖೇಡ್’ ಎಂಬ ಊರಿನ ಬಳಿ ಬರುವಾಗ ಅವಳಿಗೆ ಕೆಲವು ಬಾರಿ ವಾಂತಿ ಆಯಿತು. ಮುಂಬಯಿಯ ಬಾಪೂ ಭಕ್ತ ವೈದ್ಯರ ಸಲಹೆಯಿಂದ ಖೇಡ್‌ನ ಒಂದು ಮೆಡಿಕಲ್ ಸ್ಟೋರ್‌ನಲ್ಲಿ ಇಂಜೆಕ್ಷನ್ ತರಲು ಹೋದಾಗ ಅಲ್ಲಿ ಪರಮ ಪೂಜ್ಯ ಸದ್ಗುರು ಬಾಪೂ ಆಯಿ ಹಾಗೂ ದಾದಾರವರ ದರ್ಶನವಾಯಿತು. ‘‘ನಾನು ಎಂದೆಂದೂ ನಿಮ್ಮೊಟ್ಟಿಗೆ ಇರುತ್ತೇನೆ’’ ಎಂಬ ಬಾಪೂರವರ ವಾಕ್ಯ ನೆನಪಾಯಿತು. ಸಾಲಾಯಿನ್‌ನ ಮೂಲಕ ಇಂಜೆಕ್ಷನ್ ಕೊಟ್ಟ ಮೇಲೆ ಅವಳಿಗೆ ಒಂದೂ ಬಾರಿ ವಾಂತಿ ಆಗಲಿಲ್ಲ. ನಾವು ರಾತ್ರಿ ಮುಂಬಯಿ ಆಸ್ಪತ್ರೆಗೆ ಮುಟ್ಟಿದೆವು. ಅಲ್ಲಿ ಬಾಪೂ ಭಕ್ತ ವೈದ್ಯರು ಮೊದಲಿಂದಲೇ ಇದ್ದರು. ವಾಂತಿಯ ಕಾರಣ ಹುಡುಕಿ ಅದರ ಪ್ರಕಾರ ಚಿಕಿತ್ಸೆ ಶುರು ಮಾಡಿದರು. 1 ಜೂನ್‌ರಂದು ನಮ್ಮ ವಾಶಿಂದ್‌ನಲ್ಲಿರುವ ಮನೆಗೆ ಅವಳನ್ನು ಕೊಂಡೊಯ್ದೆವು. ಮನೆಯೊಳಗೆ ಕಾಲಿಟ್ಟ ತಕ್ಷಣ ಮನಸ್ಸಿನಲ್ಲೇ ಬಾಪೂಜಿಯವರಿಗೆ ಕೃತಜ್ಞತೆಯನ್ನು ಸಲ್ಲಿಸಿದೆನು. ಈ ಸಂಕಟ ಪರಿಸ್ಥಿತಿಯಲ್ಲಿ ನನ್ನ ಪತ್ನಿ ಮತ್ತು ಮೃತ್ಯುವಿನ ನಡುವೆ ನನ್ನ ತಂದೆ ಅನಿರುದ್ಧ ಬಾಪೂರವರೇ ಪ್ರತ್ಯಕ್ಷವಾಗಿ ನಿಂತಿರುವುದನ್ನು ನಾನು ಅನುಭವ ಮಾಡಿದೆನು.

ಅನಿರುದ್ಧ ತುಜಾ ಮೀ ಕೀತಿ ಋಣಿ ಜಾಲೋ

(ಅನಿರುದ್ಧಾ ನಾ ನಿನಗೆ ಎಷ್ಟು ಋಣಿಯಾದೆ)

ANUBHAVS

# HARI OM

© Copyright 2010, Manasamarthyadata.com

manasamarthyadata.com